*

C.C: 686/2025
PW- 1

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಮ್.ಟಿ.ಎ. ವಕೀಲರಿಂದ -</u>

ನೀವು ಮತ್ತು ಆರೋಪಿತ ಒಂದೇ ಊರಿನವರು ಎಂದರೆ ಸರಿ. ಆರೋಪಿತನಿಗೆ ಎಷ್ಟು ಹಣ ನೀಡಿದ್ದೀರಿ ಎಂದರೆ ಸಾಕ್ಷಿಯು ರೂ.2,00,000/- ನೀಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಒಕ್ಕಲುತನ ಮಾಡಿ ಜೀವನ ನಡೆಸುತ್ತೇನೆ. ನನಗೆ 12 ಎಕ್ರೆ ಜಮೀನು ಇಟಗಾ ಮತ್ತು ಟೋನ್ಸಳ್ಳಿ ಗ್ರಾಮಗಳಲ್ಲಿವೆ. ಸದರಿ ಒಕ್ಕಲುತನದಿಂದ ನನಗೆ ಸುಮಾರು ವಾರ್ಷಿಕವಾಗಿ ರೂ.4,00,000/- ಆದಾಯ ಬರುತ್ತದೆ. ನನಗೆ ಒಕ್ಕಲುತನ ಬಿಟ್ಟು ಬೇರೆ ಯಾವುದೇ ಆದಾಯ ಇಲ್ಲ.

ನಾನು ಆರೋಪಿತನಿಗೆ ರೂ.2,00,000/- ಹಣವನ್ನು ಒಮ್ಮೆಯೇ ನೀಡಿರುತ್ತೇನೆ. ನಾನು ಆರೋಪಿತನಿಗೆ ರೂ.2,00,000/- ಹಣವನ್ನು ನಗದು ರೂಪದಲ್ಲಿ ರೂ.500/- ಮುಖಬೆಲೆಯ ಹಣದ ಮುಖಾಂತರ ನೀಡಿರುತ್ತೇನೆ. ಹಣದ ಮುಖಬೆಲೆಯ ಕುರಿತು ನನ್ನ ಪ್ರಮಾಣಪತ್ರದಲ್ಲಿ ನಾನು ನಮೂದು ಮಾಡಿರುವುದಿಲ್ಲ. ನೀವು ಸದರಿ ಹಣವನ್ನು ಬಡ್ಡಿ ವ್ಯವಹಾರಕ್ಕಾಗಿ ನೀಡಿದ್ದೀರಿ ಎಂದರೆ ಸರಿಯಲ್ಲ. ನಾನು ಆರೋಪಿತನಿಗೆ ಹಣ ನೀಡಿದ ಬಗ್ಗೆ ನನ್ನ ಆದಾಯ ತೆರಿಗೆಯಲ್ಲಿ ನಮೂದು ಮಾಡಿಸಿಲ್ಲ. ನಾನು ಆರೋಪಿತನಿಗೆ ಹಣ ನೀಡಿದ ಬಗ್ಗೆ ಯಾವುದೇ ರಶೀದಿ ಪಡೆದಿಲ್ಲ. ಸಾಕ್ಷಿ ಮುಂದುವರಿದು ಆರೋಪಿತ ನನ್ನ ಸ್ನೇಹಿತನಾದ ಕಾರಣ ರಶೀದಿ ಪಡೆದಿಲ್ಲ ಎಂದು ನುಡಿಯುತ್ತಾರೆ. ನೀವು ಆರೋಪಿತನಿಗೆ ನಿಮ್ಮ ದೂರಿನಲ್ಲಿ ನಮೂದಿಸಿದಂತೆ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ.

ಆರೋಪಿತ ನಿಮ್ಮಿಂದ ರೂ.20,000/- ಕೈಗಡ ಹಣವನ್ನು ಪಡೆದಾಗ ಆರೋಪಿತನಿಂದ ಒಂದು ಖಲ್ಲಾ ಚೆಕ್ ನ್ನು ಪಡೆದು ಆರೋಪಿತ ಹಣ ಹಿಂತಿರುಗಿಸಿದರೂ ಸಹ ಚೆಕ್ ನ್ನು ಹಿಂತಿರುಗಿ ನೀಡದೆ ಅದನ್ನು ದುರುಪಯೋಗಪಡೆದುಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ-1ರ ಚೆಕ್ ನ ಮೇಲೆ ಹೆಸರನ್ನು ಮತ್ತು ಹಣದ

ಮೊತ್ತವನ್ನು ಆರೋಪಿತನೇ ನನಗೆ ಬರೆದು ಕೊಟ್ಟಿರುತ್ತಾನೆ. ನೀವೇ ನಿಪಿ-1 ಚೆಕ್ ನ ಮೇಲೆ ಬರೆದು ಆರೋಪಿತ ಬರೆದಿದ್ದಾನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,
ಚಿತ್ತಾಪೂರ.